ರೈತ ಹೋರಾಟ ಕೃತಿಯ ಅರಿಕೆಯಲ್ಲಿ, 'ಸಾಮಾನ್ಯರೇ ನೇತೃತ್ವ ವಹಿಸಿದ ಅಸಮಾನ್ಯ ಹೋರಾಟವೇ ವೀರ ತೆಲಂಗಾಣ ವಿಪ್ಲವ. ಚರಿತ್ರೆಯ ವಿದ್ಯಮಾನಗಳನ್ನು ಶ್ರಮಿಕರ ಮತ್ತು ಸಾಮಾನ್ಯರ ನೆಲೆಯಿಂದ ಚಿತ್ರಿಸಿದ ಈ ಕೃತಿ ನಮ್ಮ ಅರಿವನ್ನು ವಿಸ್ತರಿಸುತ್ತದೆ. ಈ ಹೋರಾಟ ನನ್ನಲ್ಲೊಂದು ರೋಮಾಂಚನ ಹುಟ್ಟಿಸಿದೆ, ಶ್ರಮಜೀವಿಗಳ ಬೆವರನ್ನು ಗೌರವಿಸುವವರು ಈ ಪುಸ್ತಕವನ್ನು ಓದಲಿ ಎನ್ನುವುದು ನನ್ನ ಅಪೇಕ್ಷೆ. ಈ ಆಶಯ ಈಡೇರಿದರೆ ನಾನು ನಿಜಕ್ಕೂ ಧನ್ಯ' ಎನ್ನುತ್ತಾರೆ. ಈ ಎಲ್ಲಾ ಅನುವಾದಗಳ ಅರಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಮೂರ್ತಿಯವರು ತಮ್ಮ ಅನುವಾದಗಳ ಮೊದಲ ವಿಮರ್ಶಕರೂ ಕೂಡ. ಅಂತೆಯೇ ಕನ್ನಡದ ಓದುಗರು ಓದಲಿ, ವೈಚಾರಿಕ ಅರಿವು ವಿಸ್ತರಿಸಲಿ ಎಂಬ ಅಪೇಕ್ಷೆ ನೈಜ ಕಾಳಜಿಯುಳ್ಳದ್ದು.

ಮೂರ್ತಿಯವರ ಅನುವಾದಿತ ಕೃತಿಗಳನ್ನು ವಿಮರ್ಶಿಸುವ ಪರಿಶೀಲಿಸುವಲ್ಲಿ ಬಹುತೇಕರು ತೆಲುಗು ಅನುವಾದಕ್ಕೆ ಮೂಲವಾದ ಬೇರೆ ಭಾಷೆಯ ಕೃತಿಗಳನ್ನೂ, ಮೂಲತಃ ತೆಲುಗು ಕೃತಿಗಳನ್ನು ಓದದವರು. ಹೀಗಾಗಿ ಮೂಲ ಕೃತಿಯ ಜತೆ ತೌಲನಿಕವಾಗಿ ಪರಿಶೀಲಿಸಲು ಸಾಧ್ಯವಾಗಿಲ್ಲ. ಇನ್ನು ಬಹುತೇಕರು ಅನುವಾದಿತ ಕೃತಿಗಳ ಪರಿಚಯಕ್ಕೆ ಸೀಮಿತಗೊಳಿಸಿಕೊಂಡಿದ್ದಾರೆ. ಒಂದಷ್ಟು ಕಡೆ ಮೂರ್ತಿಯವರ ಅನುವಾದಗಳ ತಾಂತ್ರಿಕ ಮಿತಿಗಳನ್ನು ಚರ್ಚಿಸಲಾಗಿದೆ. ಬಿ.ಎಂ. ಪುಟ್ಟಯ್ಯ ಅವರು ಕೆ.ಬಾಲಗೋಪಾಲ ಅವರ 'ಚರಿತ್ರೆ ಮನುಷ್ಯ ಮಾರ್ಕ್ಸ್‌ವಾದ' ಕೃತಿ ಬಗ್ಗೆ ಬರೆಯುತ್ತ, `ಮಾರ್ಕ್ಸ್‌ವಾದದ ಬಗೆಗೆ ಮೂಲ ಲೇಖಕರಿಗಿರುವಷ್ಟು ಪ್ರವೇಶ ಅನುವಾದಕರಿಗೆ ಇಲ್ಲದಿರುವುದರಿಂದ ಕೆಲವು ಕಡೆ ದೃಷ್ಟಿಕೋನದ ಸಮಸ್ಯೆ, ಪದಬಳಕೆಯ ಸಮಸ್ಯೆ ಎದುರಾಗಿದೆ. ಇದು ಮಾರ್ಕ್ಸ್‌ವಾದದ ಪರಿಚಯ ಇರುವವರಿಗೆ ಒಂದು ರೀತಿ ಕಂಡರೆ, ಇದರ ಪರಿಚಯ ಇಲ್ಲದವರಿಗೆ ಬೇರೊಂದು ರೀತಿ ಕಾಣುತ್ತದೆ' (ಪು:268) ಎಂದು ಅನುವಾದದ ಗ್ರಹಿಕೆಯ ಮಿತಿಯನ್ನು ಗುರುತಿಸುತ್ತಾರೆ. ರಹಮತ್ ತರೀಕೆರೆ ಅವರು ತೆಲಂಗಾಣ ರೈತ ಹೋರಾಟ ಕೃತಿ ಬಗ್ಗೆ ಬರೆಯುತ್ತಾ `ಅನುವಾದಕರ ಅತಿ ಸ್ಪಷ್ಟತೆ ಮತ್ತು ನಿರ್ಲಿಪ್ತತೆಗಳೆ ಅನುವಾದವನ್ನು ಶುಷ್ಕ ಕೂಡ ಮಾಡಿದಂತಿದೆ. ವಿಚಾರ ಸಾಹಿತ್ಯವನ್ನೆ ಪ್ರಧಾನವಾಗಿ ಅನುವಾದಿಸುತ್ತ ಬಂದಿರುವ ಸುಜ್ಞಾನ ಮೂರ್ತಿ ಅವರು ಅನುವಾದಕ್ಕೆ ಸೃಜನಶೀಲವಾದ ಭಾಷೆಯನ್ನು ಹುಟ್ಟಿಸಿಕೊಳ್ಳುವ ಸ್ವಾತಂತ್ರ್ಯವನ್ನು ತಾವೇ ಮೊಟಕುಗೊಳಿಸಿಕೊಂಡಂತೆ ಭಾಸವಾಗುತ್ತದೆ' (ಪು:214) ಎನ್ನುತ್ತಾರೆ.

ಸ್ವತಃ ಅನುವಾದಕರೂ ಆಗಿರುವ ಡಾ.ಮೋಹನ್ ಕುಂಟಾರ್ ಅವರು ಕನ್ನಡ ಅನುವಾದ ಪರಂಪರೆಯಲ್ಲಿ ಸುಜ್ಞಾನಮೂರ್ತಿ ಅವರ ಅನುವಾದಗಳನ್ನು ಅವಲೋಕಿಸುತ್ತಾ 'ಒಂದು ನಿರ್ದಿಷ್ಟ ಚಿಂತನೆಯನ್ನು ಕೇಂದ್ರವಾಗಿರಿಸಿ ಬೇರೆ ಬೇರೆ ಭಾಷೆಗಳ ಲೇಖಕರ ಕೃತಿಗಳನ್ನು ಇಷ್ಟು ಪ್ರಮಾಣದಲ್ಲಿ ಅನುವಾದಕರೊಬ್ಬರೇ ಕನ್ನಡದಲ್ಲಿ ನೀಡಿದ ಉದಾಹರಣೆ ಸುಜ್ಞಾನಮೂರ್ತಿ ಅವರನ್ನು ಬಿಟ್ಟರೆ ಇನ್ನೊಬ್ಬರಿಲ್ಲ' (ಪುಟ:151) ಎನ್ನುತ್ತಾರೆ. ಈ ಮಾತು ಸತ್ಯವಾಗಿದೆ. 'ಬದುಕಿನ ಬೆರಗು' ಕೃತಿಯು ಸುಜ್ಞಾನ ಮೂರ್ತಿ ಅವರ ಎಲ್ಲಾ ಅನುವಾದಗಳನ್ನು ಪರಿಚಯಿಸುತ್ತಾ, ಓದುಗರನ್ನು ಅವರ ಅನುವಾದ ಕೃತಿಗಳತ್ತ ಸೆಳೆಯುವಂತಿದೆ. ಇಡೀ ಕೃತಿ ಸೂಕ್ಷ್ಮವಾಗಿ ಕನ್ನಡ ಸಂದರ್ಭದ ಅನುವಾದ ಮೀಮಾಂಸೆಯನ್ನು ಕೂಡ ಕಟ್ಟಿಕೊಡುತ್ತದೆ. ಕೆ.ಕೆ.ನಾಯರ್ ಮಲಯಾಳಂ ಕೃತಿಗಳನ್ನು ಒಂದು ವ್ರತದಂತೆ ಕನ್ನಡಕ್ಕೆ ತಂದಂತೆ, ಚಂದ್ರಕಾಂತ ಪೋಕಳೆ ಅವರು ನಿರಂತರವಾಗಿ ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದಂತೆ, ಸುಜ್ಞಾನಮೂರ್ತಿಗಳು ನಿರಂತರವಾಗಿ ತೆಲುಗಿನಿಂದ ಕನ್ನಡಕ್ಕೆ ಪ್ರಖರ ವೈಚಾರಿಕ ಕೃತಿಗಳನ್ನು ತಂದಿದ್ದಾರೆ. ಈ ಮೂಲಕ ಕನ್ನಡದ ವೈಚಾರಿಕ ಪರಂಪರೆಯನ್ನು ಗಟ್ಟಿಗೊಳಿಸಿದ್ದಾರೆ.

ಇಂತಹ ಕೃತಿಯನ್ನು ಎಲ್ಲರಿಂದ ಬರೆಸಿ ಅಚ್ಚುಕಟ್ಟಾಗಿ ಜೋಡಿಸಿ ಸಂಪಾದನೆ ಮಾಡಿದ ಡಾ.ಪ್ರದೀಪ್ ಮಾಲ್ಗುಡಿ ಮತ್ತು ಕೃತಿಯನ್ನು ಪ್ರಕಟಿಸಿದ ಪಲ್ಲವ ಪ್ರಕಾಶನದ ಕೆ. ವೆಂಕಟೇಶ್ ಅವರ ಕೆಲಸ ನೆನಪಿನಲ್ಲಿ ಉಳಿಯುವಂಥದ್ದು. ತನ್ನ ಪಾಡಿಗೆ ತಾನು ಸದ್ದು ಗದ್ದಲವಿಲ್ಲದೆ ಕನ್ನಡದ ಕೆಲಸ ಮಾಡುತ್ತಿರುವ ಸುಜ್ಞಾನಮೂರ್ತಿಗೆ ಇದೊಂದು ಅರ್ಥಪೂರ್ಣ ಗೌರವ.

●